# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021 22ನೇ ಸಾಲಿನಲ್ಲಿ ಮೀನುಗಾರಿಕೆ ಮೋಟಾರೀಕೃತ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ (2405-00-103-0-23-ಪರಿಹಾರ) ಯೋಜನೆಯಡಿ ರೂ.50.00 ಲಕ್ಷಗಳನ್ನು ಆಡಳಿತ ಮತ್ತು ನಿರ್ದೇಶನ (2405-00-001-0-01-051/ ಸಾಮಾನ್ಯ ವೆಚ್ಚಗಳು)ಗೆ ಪುನರ್‌ವಿನಿಯೋಗ ಮಾಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/52/ಬಂದರು/2021, ದಿನಾಂಕ: 23-07-2021.

******

## ಪ್ರಸ್ತಾವನೆ:

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರಕ್ಕೆ ಸಮನಾದ ಮೊತ್ತವನ್ನು ಸಹಾಯಧನವಾಗಿ ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ನೇರವಾಗಿ ಬಿಡುಗಡೆ ಮಾಡುವ ಮೂಲಕ ಮರುಪಾವತಿ ಮಾಡುವುದು ಈ ಯೋಜನೆಯ ಉದ್ದೇಶ. ವಾರ್ಷಿಕ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 1,50,00 ಕಿಲೋ ಲೀಟರ್ ಡೀಸೆಲ್ ಮೇಲಿನ ಮಾರಾಟಕರಕ್ಕೆ ಸಹಾಯಧನ ನೀಡಲಾಗುವುದು. 2021-22ನೇ ಸಾಲಿನಿಂದ ಯಾಂತ್ರೀಕೃತ ದೋಣಿಗಳಿಗೆ 1.5 ಲಕ್ಷ ಕಿಲೋ ಲೀಟರ್ ಡೀಸೆಲ್ ಡೆಲಿವರಿ ಪಾಯಿಂಟ್ ನಲ್ಲಿಯೇ ಕರರಹಿತ ದರದಲ್ಲಿ ವಿತರಿಸಲು ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಈ ಯೋಜನೆಯ ಉಪ ಲೆಕ್ಕಶೀರ್ಷಿಕೆ 100 (ಪರಿಹಾರ)ಯಡಿ 2021-22ನೇ ಸಾಲಿನ ಆಯವ್ಯಯದಲ್ಲಿ ರೂ.10300.00 ಲಕ್ಷಗಳನ್ನು ಒದಗಿಸಲಾಗಿದೆ ಮತ್ತು 2021-22ನೇ ವರ್ಷದ ಮೀನುಗಾರರ ಕೋವಿಡ್ ಪರಿಹಾರ ಪ್ಯಾಕೇಜ್ ಅಡಿಯಲ್ಲಿ ಮೀನುಗಾರರ ಕಲ್ಯಾಣ ಉಳಿತಾಯ ಮತ್ತು ಪರಿಹಾರ ಯೋಜನೆಗೆ ರೂ.562.00 ಲಕ್ಷಗಳನ್ನು ಪುನರ್ ವಿನಿಯೋಗ ಮಾಡಿಕೊಳ್ಳಲಾಗಿದೆ. 2021ರ ಜುಲೈ ಅಂತ್ಯಕ್ಕೆ ಈ ಯೋಜನೆಯಡಿ ರೂ.5150.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ರೂ.2234.79 ಲಕ್ಷಗಳ ವೆಚ್ಚ ಮಾಡಲಾಗಿದೆ ಹಾಗಾಗಿ ಪ್ರಸಕ್ತ ರೂ.2915.20 ಲಕ್ಷ ಅನುದಾನ ಸದರಿ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ವೆಚ್ಚವಾಗದೇ ವ್ಯಪಗತವಾಗುತ್ತದೆ ಎಂದು ತಿಳಿಸಿರುತ್ತಾರೆ

ಇಲಾಖೆಯ ಸೌಲಭ್ಯಗಳು, ಸೇವೆಗಳು, ಸಮಾಲೋಚನೆ, ಶಿಕ್ಷಣ, ತರಬೇತಿ ಶಿಬಿರಗಳು ಕಾರ್ಯಗಾರಗಳು, ಸಂಶೋದನೆ ಕಾರ್ಯಕ್ರಮಗಳು ಸೇರಿದಂತೆ ಇನ್ನಿತರೆ ವಿಷಯಗಳ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಲು ಹಾಗೂ ಅವರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ದಿನದ 24 ಗಂಟೆಗಳ ಸಹಾಯವಾಣಿ ಸೇವೆಯನ್ನು ಜೂನ್ 01 ರಿಂದ ಪ್ರಾರಂಭಿಸಲು ಹಾಗೂ ಆಡಳಿತ ಮತ್ತು ನಿರ್ದೇಶನ ಸಾಮಾನ್ಯ ವೆಚ್ಚಗಳು ಯೋಜನೆಯಡಿ ವೆಚ್ಚ ಭರಿಸಲು ಸರ್ಕಾರಿಂದ ಮಂಜೂರಾತಿ ನೀಡಲಾಗಿದೆ. ಸಹಾಯವಾಣಿ ಕೇಂದ್ರವನ್ನು ಪಶುಪಾಲನಾ ಭವನ, ಹೆಬ್ಬಾಳ.

Kamakshi U.A.

ಬೆಂಗಳೂರು ಇಲ್ಲಿ ಸ್ಥಾಪಿಸಲು Hard Ware/Software requirements ಗೆ ರೂ.15,28,307-00 (ಒಂದು ಬಾರಿ) ಮತ್ತು Manpower costing ರೂ.6,56,670 ಗಳು (ಪ್ರತಿ ತಿಂಗಳು) ವೆಚ್ಚವಾಗುತ್ತದೆ ಎಂದು ತಿಳಿಸಿರುತ್ತಾರೆ.

ಈ ಯೋಜನೆಯ ಉಪ ಲೆಕ್ಕಶೀರ್ಷಿಕೆ 051 (ಸಾಮಾನ್ಯ ವೆಚ್ಚಗಳು)ಯಡಿ 2021-22ನೇ ಸಾಲಿನ ಆಯವ್ಯಯದಲ್ಲಿ ರೂ.130.00 ಲಕ್ಷಗಳನ್ನು ಒದಗಿಸಲಾಗಿದೆ ಮತ್ತು 2021ರ ಜುಲೈ ಅಂತ್ಯಕ್ಕೆ ಸದರಿ ಉಪ ಲೆಕ್ಕ ಶೀರ್ಷಿಕೆಯಡಿ ರೂ.65.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ರೂ.12.15 ಲಕ್ಷಗಳ ವೆಚ್ಚವನ್ನು ಮಾಡಲಾಗಿದೆ. ಈ ಉಪ ಶೀರ್ಷಿಕೆನಲ್ಲಿ ರೂ.52.85 ಲಕ್ಷಗಳು ಉಳಿದಿರುತ್ತದೆ ಹಾಗೂ ರಾಜ್ಯದ ವಿವಿಧ ಮೀನುಗಾರಿಕೆ ಉಪ ಕಛೇರಿಗಳು ಮತ್ತು ಮೀನುಮರಿ ಉತ್ಪಾದನಾ ಕೇಂದ್ರಗಳು ಮೀನು ಆಹಾರ, ಮೀನುಗಾರಿಕೆ ಸಲಕರಣೆಗಳ ಖರೀದಿಗಾಗಿ, ನಿರ್ವಹಣೆ ಮತ್ತು ಇತರ ಉತ್ಪಾದನಾ ಸಂಬಂಧಿತ ಚಟುವಟಿಕೆಗಳ ಕೆಲಸಗಳಿಗಾಗಿ, ವಿಸ್ತರಣೆ ಇತ್ಯಾದಿಗೆ ವೆಚ್ಚವನ್ನು ಭರಿಸಲಾಗುತ್ತದೆ. ರಾಜ್ಯದಲ್ಲಿ ಮುಂಗಾರು ಆರಂಭವಾಗಿರುವುದರಿಂದ, ಮೀನುಗಾರಿಕೆ ಚಟುವಟಿಕೆಗಳು ಪ್ರಗತಿಯಲ್ಲಿವೆ. ಆದ್ದರಿಂದ, ಈ ಉಪ ಲೆಕ್ಕ ಶೀರ್ಷಿಕೆಯಲ್ಲಿ ಬಿಡುಗಡೆಯಾದ ಮೊತ್ತವನ್ನು ಮೀನುಗಾರಿಕೆ ಉಪ ಕಛೇರಿಗಳಿಗೆ ನೀಡಲಾಗಿದೆ ಹಾಗೂ ಶೀಘ್ರದಲ್ಲಿ ವೆಚ್ಚ ಮಾಡಲಾಗುವುದು. ಆದ್ದರಿಂದ ಬಾಕಿ ಮೊತ್ತ ರೂ.52.85 ಲಕ್ಷವನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸಲು ಸಾಧ್ಯವಾಗುವುದಿಲ್ಲಎಂದು ತಿಳಿಸುತ್ತಾ, ಸಹಾಯವಾಣಿ ಸ್ಥಾಪನೆ ಮತ್ತು ಸಿಬ್ಬಂದಿಯ 05 ತಿಂಗಳುಗಳ ವೇತನಕ್ಕಾಗಿ ರೂ.50.00 ಲಕ್ಷಗಳು ಅಗತ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ರೂ.50.00 ಲಕ್ಷಗಳನ್ನು ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ (2405-00-103-0-23-ಪರಿಹಾರ) ರಿಂದ ಆಡಳಿತ ಮತ್ತು ನಿರ್ದೇಶನ (2405-00-001-0-01-ಸಾಮಾನ್ಯ ವೆಚ್ಚಗಳು)ಗೆ ಪುನರ್ವಿನಿಯೋಗ ಮಾಡಿ ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 192 ಮೀಇಯೋ 2021, ಬೆಂಗಳೂರು ದಿನಾಂಕ: 25-08-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2021ನೇ ಸಾಲಿನಲ್ಲಿ ಮೀನುಗಾರಿಕೆ ಮೋಟಾರೀಕೃತ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ ಯೋಜನೆ ಲೆಕ್ಕ ಶೀರ್ಷಿಕೆ 2405-00-103-0-23-ಪರಿಹಾರ ಯೋಜನೆಯಡಿ ಲಭ್ಯವಿರುವ ಮೊತ್ತದಿಂದ ಆಡಳಿತ ಮತ್ತು ನಿರ್ದೇಶನ ಲೆಕ್ಕ ಶೀರ್ಷಿಕೆ 2405-00-001-0-01-051(ಸಾಮಾನ್ಯ ವೆಚ್ಚಗಳು)ಗೆ ಅಗತ್ಯವಿರುವ ರೂ.50.00 ಲಕ್ಷ (ಐವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಈ ಆದೇಶದ ಅನುಬಂಧದಲ್ಲಿ ವಿವರಿಸಿರುವಂತೆ ಪುನರ್ವಿನಿಯೋಗ ಮಾಡಿ, ಬಿಡುಗಡೆಗೊಳಿಸಲಾಗಿದೆ.

Kamakshi U.A

ಈ ಆದೇಶವನ್ನು ಆದೇಶ ಸಂಖ್ಯೆ: ಎಫ್‌ಡಿ/11/ಟಿಎಫ್‌ಪಿ/2007, ದಿನಾಂಕ: 27-11-2007 ರಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 25/8/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

## ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-192/ಮೀಇಯೋ/2021, ಬೆಂಗಳೂರು ದಿನಾಂಕ: 25-08-2021

### ಅನುಬಂಧ

ಆಯವ್ಯಯ ಪತ್ರದಲ್ಲಿ ಅಥವಾ ಹೆಚ್ಚುವರಿ ಅಲಾಟ್‌ಮೆಂಟ್ ಕಲ್ಪಿಸಿದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಬಗ್ಗೆ [illegible] ಪುನರ್ವಿನಿಯೋಗದ ವಿವರವುಳ್ಳ ಪಟ್ಟಿ

| ಕ್ರ. ಸಂ | ಮುಂಗಡ ಪತ್ರದ ಪ್ರಧಾನ ಲೆಕ್ಕ ಶೀರ್ಷಿಕೆ ಉಪ ಮತ್ತು ವಿವರವಾದ ಶೀರ್ಷಿಕೆಗಳು | ಹೆಚ್ಚಿಸಲು ಪ್ರಸ್ತಾಪಿಸಲಾದ ಅಂದಾಜಿನ ಶೀರ್ಷಿಕೆ | | | | ಕಡಿಮೆ ಮಾಡಲು ಪ್ರಸ್ತಾಪಿಸಲಾದ ಅಂದಾಜಿನ ಶೀರ್ಷಿಕೆ | | | | | ಹೆಚ್ಚಿನ ಅಥವಾ ಉಳಿತಾಯಕ್ಕೆ ಕಾರಣ ವಿವರಣೆಗಳು |
|---|---|---|---|---|---|---|---|---|---|---|---|
| | | ಮಂಜೂರಾದ ಆಯವ್ಯಯ ಅಂದಾಜಿನಲ್ಲಿರುವ ಮೊತ್ತ | ಇದುವರೆಗೆ ಆಗಿರುವ ವಾಸ್ತವಿಕ ವೆಚ್ಚ | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಬೇಕಾದ ಹೆಚ್ಚಿನ ಅಲಾಟ್‌ಮೆಂಟ್ ವಿವರ | ಪರಿಷ್ಕೃತ ಅಂದಾಜಿನಲ್ಲಿರುವ ಮೊತ್ತ | ಬಿಡುಗಡೆ ಆದ ಮೊತ್ತ | ಇದುವರೆಗೆ ಆಗಿರುವ ವಾಸ್ತವಿಕ ವೆಚ್ಚ | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಪುನರ್ವಿನಿಯೋಗಕ್ಕೆ ಲಭ್ಯವಿರುವ ಮೊತ್ತ | |
| 1 | 2405-ಮೀನುಗಾರಿಕೆ 00-001-ಆಡಳಿತ ಮತ್ತು ನಿರ್ದೇಶನ-0-01-051 ಸಾಮಾನ್ಯ ವೆಚ್ಚಗಳು ಸಂಪುಟ-3 ಪುಟ ಸಂಖ್ಯೆ 73 | 65.00 | 12.15 | 102.85 | 50.00 | | | | | | ಸಲಹಾ ಸಂಸ್ಥೆಯ ಸ್ಥಾಪನೆ ಮತ್ತು ಸಿಬ್ಬಂದಿಯ 05 ತಿಂಗಳುಗಳ ವೇತನಕ್ಕಾಗಿ ರೂ. 50.00 ಲಕ್ಷಗಳು ಅಗತ್ಯವಿರುತ್ತದೆ ಸದರಿ ಮೊತ್ತವನ್ನು ಇಲಾಖೆಯಲ್ಲಿ ಲಭ್ಯವಿರುವ ಅನುದಾನದಿಂದ ಪುನರ್ವಿನಿಯೋಗ ಮಾಡುವ ಅವಶ್ಯಕತೆ ಇರುತ್ತದೆ |
| 2 | 2405-ಮೀನುಗಾರಿಕೆ-103 ಸಮುದ್ರ ಮೀನುಗಾರಿಕೆ-0-37 ಮೀನುಗಾರಿಕೆ ಮೋಟಾರೀಕೃತ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ-100-(ಪರಿಹಾರ) ಸಂಪುಟ 3 ಪುಟ ಸಂಖ್ಯೆ 75 | | | | | 9738.00 | 5150.00 | 2234.79 | 7453.21 | 50.00 | ಸದರಿ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಪೂರ್ಣವಾಗಿ ಬಳಸಲು ಸಾಧ್ಯವಾಗದ ಉಳಿತಾಯವಾಗುತ್ತದೆ |
| | ಒಟ್ಟು | 65.00 | 12.15 | 102.85 | 50.00 | 9738.00 | 5150.00 | 2234.79 | 7453.21 | 50.00 | |

Kamakshi U.A. 25/8/21

(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)